(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಅವರಿಗೆ ಸ್ವಲ್ಪ ಹೇಳಿರಿ. ತಮ್ಮ ಹೇಳಿಕೆಯಿಂದ ಬುದ್ಧಿ ಬಂದಾದರೂ ಉತ್ತರ ಕೊಡುತ್ತಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದಕ್ಕೆ ಒಬ್ಬ ಮಂತ್ರಿಗಳನ್ನು ನೇಮಿಸಿ. ಸರಿಯಾಗಿ ಉತ್ತರ ಕೊಡುವುದಕ್ಕೆ ಒಬ್ಬರನ್ನು ನೇಮಿಸಿರಿ.

ಅಧ್ಯಕ್ಷರು : ಅವರು ತಯಾರಾಗಿ ಬಂದಿಲ್ಲ. ಇದನ್ನು ಮತ್ತೆ ಹೆಲ್ಡ್ ಓವರ್ ಮಾಡುತ್ತೇನೆ. ಪುನಃ ಮುಂದಿನವಾರ ತೆಗೆದುಕೊಳ್ಳೋಣ.

ಶ್ರೀ ಅಂಜನಮೂರ್ತಿ : ಮುಂದಿನವಾರವೋ ಅಥವಾ ಮುಂದಿನ ವರ್ಷವೋ?

ಅಧ್ಯಕ್ಷರು : ಅವರು ತಯಾರಾಗಿ ಬಂದಿಲ್ಲ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

<u>ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 5.3.93ರ ಲಿಖಿತ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 66 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 1250, 1370, 1370ಎ, 1414, 742, 1544, 249, 531, 159, 106, 963, 961, 1461, ಮತ್ತು 598 ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 52 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

<u>ವಿಷಯ :- ಬೆಂಗಳೂರು ಸುತ್ತಮುತ್ತ ಹಸಿರು ಪಟ್ಟಿಯ ವಿಸ್ತೀರ್ಣ.</u>

Q:1135

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ಬೆಂಗಳೂರು ನಗರ ಸುತ್ತಮುತ್ತಲಿನ ಹಸಿರು ಪಟ್ಟಿಯ ವಿಸ್ತೀರ್ಣ :
ಆ) ಹಸಿರು ಪಟ್ಟಿ ಪ್ರದೇಶದಲ್ಲಿ ಅನಧಿಕೃತ ಬೆಳವಣಿಗೆ ಆಗಿರುವ ವಿಸ್ತೀರ್ಣವನ್ನು ನಿರ್ಣಯಿಸಲು ಸಮೀಕ್ಷೆ ಮಾಡಲಾಗಿದೆಯೇ?
ಇ) ಇಲ್ಲದಿದ್ದಲ್ಲಿ ಹಸಿರು ವಲಯ ಪ್ರದೇಶದಲ್ಲಿ ಅನಧಿಕೃತ ಬೆಳವಣಿಗೆ ಆಗಿರುವ ವಿಸ್ತೀರ್ಣವನ್ನು ನಿರ್ಣಯಿಸುವ ಬಗ್ಗೆ ಸಮೀಕ್ಷೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಅನುಮೋದಿಸಿರುವ ಬೆಂಗಳೂರು ನಗರದ ವ್ಯಾಪಕ ಅಭಿವೃದ್ಧಿ ಯೋಜನೆಯ ನಕ್ಷೆಯಂತೆ ಹಸಿರು ಪಟ್ಟಿಯ ವಿಸ್ತೀರ್ಣ 839.72 ಚದರ ಕಿ.ಮೀ. ಆಗಿರುತ್ತದೆ.

ಆ) -ಇಲ್ಲಾ-

ಇ) ಎಷ್ಟು ವಿಸ್ತೀರ್ಣದಲ್ಲಿ ಅನಧಿಕೃತ ಬೆಳವಣಿಗೆ ಆಗಿದೆ ಎಂದುದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ : ಬಚಾವತ್ ವೇತನ ಮಂಡಳಿಯ ಶಿಫಾರಸ್ಸು

Q:1252

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬಚಾವತ್ ವೇತನ ಮಂಡಳಿಯ ಶಿಫಾರಸ್ಸುಗಳನ್ನು ಸರಕಾರವು ಕಾರ್ಯರೂಪಕ್ಕೆ ತಂದಿದೆಯೆ?

ಆ) ಹಾಗಿದ್ದಲ್ಲಿ ಈಗಾಗಲೇ ಯಾವ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತಂದಿದೆ. ಹಾಗೂ ಯಾವ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರಲು ಗುರಿ ಹೊಂದಿದೆ?

ಇ) ಕೇರಳ ರಾಜ್ಯದಲ್ಲಿರುವಂತೆ ವೇತನ ಮಂಡಳಿಯ ಶಿಫಾರಸ್ಸಿನನ್ವಯ ಪತ್ರಕರ್ತರಿಗೆ ಪಿಂಚಣಿ ನಿಧಿಯೊಂದನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ?